“ಎಲ್ಲರನ್ನೂ ಒಳಗೆ ಹಾಕಿ, ಬೆಂಡೆತ್ತಿ; ಸತ್ಯ ತಾನಾಗಿಯೇ ಹೊರಬರುತ್ತದೆ. ಇವತ್ತು ಬಿಟ್ಟರೆ ನಾಳೆ ಇನ್ನೂ ದೊಡ್ಡದಾದ ಕಳ್ಳತನ ನಡೆಯತ್ತೆ; ಇಂತಹ ಕೃತ್ಯಗಳನ್ನು, ಅಪರಾಧಗಳನ್ನು ಆರಂಭದಲ್ಲೇ ಹಿಸುಕಿಹಾಕಬೇಕು. ಅಪರಾಧಿಗೆ ಯಾವುದೇ ಕಾರಣಕ್ಕೂ ಶಿಕ್ಷೆ ತಪ್ಪಬಾರದು...” ಗುತ್ತಿಗೆದಾರ ಒಂದೇ ಸಮನೆ ಅಧಿಕಾರಿಗೆ ಸಲಹೆ ನೀಡುತ್ತಲೇ ಇದ್ದ.

ಪೊಲೀಸ್ ಅಧಿಕಾರಿ ಆತನ ಯಾವುದೇ ಮಾತಿಗೆ ಉತ್ತರಿಸಲಿಲ್ಲ. ಗಹನವಾದ ರೀತಿಯಲ್ಲಿ ಏನನ್ನೋ ಯೋಚಿಸುತ್ತಿದ್ದಂತೆ ಕಂಡುಬಂದ. ಇದನ್ನು ಕಂಡು ಗುತ್ತಿಗೆದಾರನಿಗೆ ಆ ಅಧಿಕಾರಿಯ ಮೇಲೆ ಸಿಟ್ಟೇ ಬಂತು.

“ನಿಮಗೆ ನನ್ನ ಮಾತು ಕೇಳಿಸುತ್ತಿಲ್ಲವೇ?” ಕೇಳಿಯೇಬಿಟ್ಟ.

“ಕಿವಿ ನೆಟ್ಟಗಿದೆ. ಆದರೆ ನಾನು ಯೋಚಿಸುತ್ತಿದ್ದೇನೆ, ಇದನ್ನು ಕಳ್ಳತನ ಎನ್ನಬಹುದೇ ಎಂದು.”

“ಅಂದರೆ?”

ಗುತ್ತಿಗೆದಾರನ ಮುಖಚಹರೆಯಲ್ಲಿ ಇದ್ದಕ್ಕಿದ್ದಂತೆ ಗಣನೀಯ ಮಾರ್ಪಾಟು; ವರ್ತನೆಯಲ್ಲಿಯೂ ಕೂಡ. ಮಾತನ್ನು ತಡೆತಡೆದು ಹೊರಹಾಕಿದ್ದ. ಆತನಿಗೆ ಉತ್ತರಿಸತೊಡಗಿದ್ದ ಪೊಲೀಸ್ ಅಧಿಕಾರಿ. “ನೋಡಿ, ಮೂಟೆಯಲ್ಲಿದ್ದ ಸಿಮೆಂಟನ್ನು ಇಲ್ಲಿಯೇ ಚೆಲ್ಲಿದ್ದಾರೆ; ತೆಗೆದುಕೊಂಡು ಹೋಗಿಲ್ಲ. ಇದು ಸಿಮೆಂಟ್‌ನ ಗೋದಾಮಲ್ಲವೇ; ಚೀಲಗಳ ಉಗ್ರಾಣವಲ್ಲ ತಾನೇ? ಸಿಮೆಂಟ್‌ನ ಗೋದಾಮಿನಿಂದ ಸಿಮೆಂಟನ್ನು ಕಳವು ಮಾಡಿದ್ದರೆ, ಅದು ಪ್ರಕರಣವಾಗುತ್ತಿತ್ತು. ಸಿಮೆಂಟ್ ಗೋದಾಮಿನಿಂದ ಕೇವಲ ಐದು ಚೀಲಗಳನ್ನು ತೆಗೆದುಕೊಂಡು ಹೋದರೆ, ಅದು ಪ್ರಕರಣ ಹೇಗಾಗುತ್ತದೆ?”

